ತಾರೀಖು 8ನೆ ಮೇ 1907.

ನಂ. ರೆ. 9823—ಲ್ಯಾ. ರೆ. 531-06-3, ಸ್ಯ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಆಕ್ವಿಜಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ಮೈಸೂರು ಡಿಸ್ಟ್ರಿಕ್ಟ್ ನುಗಳವಳ್ಳಿ ತಾಲ್ಲೂಕಿನಲ್ಲಿ ಕಾವೇರಿ ವೈದ್ಯುತಶಕ್ತಿ ವಾಹೋಪಾಯದ ಲೈನಿಗೆ ಸಂಬಂಧಪಟ್ಟ ಜನರ ಉಪಯೋಗಕ್ಕೆ ಬಂದು ಕಟ್ಟಿಡ ಕಟ್ಟುವುದಕ್ಕೆ ಆವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಫೈಂಬರ್‌ರಾಕ್ಸ್ ಸಬ್ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮ್ಮಿಷನರಿಗೆ ಸದರೀ ಜಮೀನನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟ್.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರನ ಹೆಸರು.	ಸರ್ವೆ ನಂಬರು.	ಮಿಸ್ಲು ಹಿರಿಯ ಬಾಗಾಯತು.	ಒಟ್ಟು ವಿಸ್ತೀರ್ಣ.	ಕಂದಾಯ.	ಈಗ ಸರಕಾರಕ್ಕೆ ಪ್ರಕಾಶಿಸಿರುವ ವಿಸ್ತೀರ್ಣ.		ಚತುರ್ಗಡಿ.			
									ವಿಸ್ತೀರ್ಣ.	ಕಂದಾಯ	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಮೈಸೂರು	ನಾಗಮಂಗಲ	ಹಲಗೂರು	ಹೊನ್ನಿಗಹಳ್ಳಿ	ಚಿಕ್ಕ ಮಾತೆ ಜಾಯಿಯ ಮಾತೆ ಸದರಿದಾರರು.	54-2	ಮಿಷಿ	ಎ. ಗು. 0 23	ರೂ. ಅ. 0 8	ಎ. ಗು. 0 10	ರೂ. ಅ. 0 3	ಸರ್ವೆ ನಂಬರು 54	ಹರಿಹರಹಳ್ಳಿಯ ಗ್ರಾಮದ ರಸ್ತೆ	ಕಾನಕಾನಹಳ್ಳಿಯ ರಸ್ತೆ	ಸರ್ವೆ ನಂಬರು 54

ತಾರೀಖು 14ನೆ ಮೇ 1907.

ನಂ. ರೆ. 9922 ಲ್ಯಾ. ರೆ. 11-06-26, 1907ನೆ ಇಸವಿಯ ಏಪ್ರಿಲ್ 27ನೆ ತಾರೀಖಿನ ಅಪರಾಹ್ನದಲ್ಲಿ ಹಾಸನ ಡಿಸ್ಟ್ರಿಕ್ಟ್ ಮತ್ತು ಖಜಾನೆಯ ಚಾರ್ಜ್‌ನ್ನು ಡೆಪ್ಯೂಟಿ ಕಮಿಷನರ್ ಮಿ|| ಪಿ. ಆರ್. ಡಬ್ಲ್ಯೂ. ವೆದರಾಲ್‌ರವರು ಒಪ್ಪಿಸಿದರು ಮತ್ತು ಅಫಿಷಿಯೇಟಿಂಗ್ ಡೆಪ್ಯೂಟಿ ಕಮಿಷನರ್ ಮಿ|| ಕೆ. ಆರ್. ಶ್ರೀನಿವಾಸೈಯ್ಯಂಗಾರ್ ಎಂ. ಎ. ಯವರು ವಹಿಸಿದರು.

ಹುಕುಂ ಬಮೋಜೀಬ್,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರಿಟೆರಿ.

ಪಬ್ಲಿಕ್ ವರ್ಕ್ಸ್.
ಇಸ್ತಿಹಾರ್ನಾಮೆ.

ತಾರೀಖು 21ನೆ ಮೇ 1907.

ನಂ. 463—3663, ಪ್ಲೇಗ್ ಡಿವೀಜನ್ನಿಗೆ ಸೇರಿದ ಸಬ್ ಅಸಿಸ್ಟೆಂಟ್ ಇಂಜೆನಿಯರ್ ಮಿ|| ಎಸ್. ಶ್ರೀನಿವಾಸ ಅಯ್ಯರ್, ಬಿ. ಇ. ಯವರಿಗೆ ಮೈಸೂರು ಸರ್ವಿಸ್ ರೆಗ್ಯುಲೇಷನ್ 177ನೆ ಆರ್ಟಿಕಲ್ ಅನುಸರಿಸಿ ಸ್ಯ 1907ನೆ ಜೂನ್ 8ನೆ ತಾರೀಖಿನಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ 20 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿದೆ.

ಹುಕುಂ ಬಮೋಜೀಬ್,
ಡಬ್ಲ್ಯೂ. ಮೆಕ್‌ಹಟೀ,
ಪಬ್ಲಿಕ್ ವರ್ಕ್ಸ್ ಇಲಾಖಾ ಮೈಸೂರು ಗವರ್ನ್‌ಮೆಂಟ್ ಸೆಕ್ರಿಟೆರಿ.

ಮು ಜ ರೈ.
ಇಸ್ತಿಹಾರ್ನಾಮೆ.

ತಾರೀಖು 18ನೆ ಏಪ್ರಿಲ್ 1907 ಮತ್ತು 13ನೆ ಮೇ 1907.

ನಂ. 4888—ತಿಪ್ಪೂರು ತಾಲ್ಲೂಕು ನೊಣವಿನ ಕೆರೆಯಲ್ಲಿರುವ ಶ್ರೀ ಬ್ಯಾಟರಾಯಸ್ವಾಮಿಯವರ ದೇವಸ್ಥಾನದ ಮೇಲ್ವಿಚಾರಣೆ ನಡಿಸುವದಕ್ಕಾಗಿ ಇದರಡಿ ನಮೂದು ಮಾಡಿರುವವರನ್ನ ಧರ್ಮದರ್ಶಿಗಳಾಗಿ ನೇಮಿಸಿ ಇದೆ.

(1) ಮು|| ರಾ|| ಕಾರಕೂ ರಾಮಸ್ವಾಮೈಯ್ಯಂಗಾರ್.
(2) ,, ಕಸ್ತೂರಿ ರಂಗೈಯ್ಯಂಗಾರ್ ಜಮೀರ್ದಾರ್.
(3) ,, ಬಿ. ದೇಶಿಕಾಚಾರ್, ಪದರೋಗ ಡಿಟೋ
(4) ,, ನರಹರಿಯಪ್ಪ, ಜಮೀರ್ದಾರ್
(5) ,, ಸುಬ್ಬರಾವ್, ಶ್ಯಾನಭೋಗರು.

ಹುಕುಂ ಬಮೋಜೀಬ್,
ಎಲ್. ಅನಂತಸ್ವಾಮಿರಾವ್,
ಸೆಕ್ರಿಟೆರಿ.